# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೃಷಿ ಇಲಾಖೆಯಲ್ಲಿ ಭೂಚೇತನ ಯೋಜನೆಯ ಪ್ರಮುಖ ಸಾಧನೆಗಳನ್ನು ಬಿಂಬಿಸುವ ಜಾಹಿರಾತುಗಳನ್ನು ಪತ್ರಿಕಾ ಪ್ರಕಟಣೆಗೆ ಘಟನೋತ್ತರ ಮಂಜೂರಾತಿ ನೀಡುವ ಕುರಿತು.

ಓದಲಾಗಿದೆ: 1. ಮುಖ್ಯಮಂತ್ರಿಯವರ ಸಚಿವಾಲಯ ಪತ್ರ ಸಂ:ಮುಮಪ್ರಕಾ-2/ಬೆ/006/2012, ದಿ: 11-12-2012.
2. ಕೃಷಿ ನಿರ್ದೇಶಕರ ಪತ್ರ ಸಂ:ಉಕೃನಿ(ಆ.ಬೆ)/ಭೂಚೇ/ಪ.ಜಾಹಿರಾತು/ 2012-13, ದಿ: 04-03-2013/08-05-2013/05-12-2013.
3. ವಾರ್ತಾ ಇಲಾಖೆ ನಿರ್ದೇಶಕರ ಪತ್ರ ಸಂ:ವಾಇ/ವಾಪ್ರವಿ/ಸಿ3/2013-14/2611, ದಿ: 02-12-2013.

**ಪ್ರಸ್ತಾವನೆ:**

ಮೇಲೆ ಕ್ರಮಾಂಕ (1) ರಲ್ಲಿನ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ-2 ರವರ ಟಿಪ್ಪಣಿಯಲ್ಲಿ ಕಳೆದ ನಾಲ್ಕುವರೆ ವರ್ಷಗಳಲ್ಲಿ ಸರ್ಕಾರವು ಸಾಧಿಸಿರುವ ಪ್ರಗತಿಯನ್ನು ರಾಜ್ಯದ ಜನತೆಗೆ ತಿಳಿಸಲು ಜಾಹಿರಾತು ಅಭಿಯಾನದಲ್ಲಿ ಕೃಷಿ ಇಲಾಖೆಯ ಭೂಚೇತನ ಯೋಜನೆಗೆ ಸಂಬಂಧಿಸಿದಂತೆ ಸಾಧನೆಯನ್ನು ಬಿಂಬಿಸುವ ಜಾಹಿರಾತುಗಳನ್ನು ಇಲಾಖೆಯ ವತಿಯಿಂದ ತಯಾರಿಸಿ, ವಾರ್ತಾ ಇಲಾಖೆಯ ಮುಖಾಂತರ (ಮುಖ್ಯಮಂತ್ರಿಯವರ ಅನುಮೋದನೆ ಪಡೆದು) ಬಿಡುಗಡೆ ಮಾಡಲು ಸೂಚನೆ ಇರುತ್ತದೆ. ಇದಕ್ಕೆ ತಗಲುವ ವೆಚ್ಚವನ್ನು ಇಲಾಖೆಯೇ ಭರಿಸತಕ್ಕದ್ದು ಎಂದು ಸಹ ತಿಳಿಸಿದೆ.

ಮೇಲೆ ಕ್ರಮಾಂಕ (2) ರಲ್ಲಿನ ದಿ:04-03-2013ರ ಕೃಷಿ ನಿರ್ದೇಶಕರ ಪತ್ರದಲ್ಲಿ ಕೃಷಿ ಇಲಾಖೆಯ ಭೂಚೇತನ ಯೋಜನೆಯ ಜಾಹಿರಾತು ಮಾಹಿತಿಯನ್ನು ವಾರ್ತಾ ಇಲಾಖೆಗೆ ನೀಡಿ ವಾರ್ತಾ ಇಲಾಖೆಯು ಮೆ//ಮಾರ್ಕೆಟಿಂಗ್ ಕನ್ಸಲ್ಟಂಟ್ಸ್ & ಏಜೆನ್ಸೀಸ್ ಲಿಮಿಟೆಡ್ ಮತ್ತು ಪಬ್ಲಿಸಿಟೀಸ್ ರವರ ಮುಖಾಂತರ ಜಾಹಿರಾತನ್ನು ಪ್ರಕಟಿಸಿದ್ದು, ಅದಕ್ಕೆ ಮಾಡಲಾದ ವೆಚ್ಚ ರೂ.8,64,487/- ಗಳನ್ನು ಪಾವತಿಸಲು ಕೃಷಿ ನಿರ್ದೇಶಕರಿಗೆ ಘಟನೋತ್ತರ ಮಂಜೂರಾತಿ ನೀಡಿ, ಸದರಿ ಬಿಲ್ಲುಗಳಿಗೆ ಮೇಲು ಸಹಿ ಮಾಡುವ ಅಧಿಕಾರವನ್ನು ನೀಡುವಂತೆ ಕೋರಿದೆ. ಆನಂತರ ದಿ: 05-12-2013ರ ಪತ್ರದಲ್ಲಿ ಸದರಿ ವೆಚ್ಚವನ್ನು ಬೇಸಾಯ ಸಂಬಂಧಿತ ಚಟುವಟಿಕೆಗಳು, ಲೆಕ್ಕ ಶೀರ್ಷಿಕೆ: 2401-00-109-0-21 (059) (ಹಿಂದಿನ ಸಮಗ್ರ ಕೃಷಿ ವಿಸ್ತರಣಾ ಪದ್ಧತಿ) ಅಡಿ ಭೂಚೇತನ ಕಾರ್ಯಕ್ರಮಕ್ಕಾಗಿ ಬಿಡುಗಡೆ ಮಾಡಿರುವ ಅನುದಾನದಲ್ಲಿ ಭರಿಸಲು ಮಂಜೂರಾತಿ ನೀಡಲು ಕೋರಿದೆ.

ಮೇಲೆ ಕ್ರಮಾಂಕ (3) ರ ಪತ್ರದಲ್ಲಿ ವಾರ್ತಾ ಇಲಾಖೆಯ ನಿರ್ದೇಶಕರು ಕೃಷಿ ನಿರ್ದೇಶಕರಿಗೆ ಬರೆದಿರುವ ಪತ್ರದಲ್ಲಿ ಭೂಚೇತನ ಕುರಿತು ಮೆ//ಎಂ.ಸಿ. & ಎ ಸಂಸ್ಥೆಯು ಸಿದ್ದಪಡಿಸಿದ್ದ ವಿನ್ಯಾಸವನ್ನು ಸನ್ಮಾನ್ಯ ಮುಖ್ಯಮಂತ್ರಿಗಳ ಸಚಿವಾಲಯದಲ್ಲಿ ಪರಿಶೀಲಿಸಿ ಮೌಖಿಕ ಅನುಮೋದನೆ ಪಡೆಯಲಾಗಿದೆ ಎಂದು ವಿವರಿಸಿದೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ/23/ಕೃಉಇ/2013, ಬೆಂಗಳೂರು,**
**ದಿನಾಂಕ: 21-07-2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕೃಷಿ ಇಲಾಖೆಯ ಭೂಚೇತನ ಯೋಜನೆ ಕುರಿತ ಜಾಹಿರಾತನ್ನು ವಾರ್ತಾ ಇಲಾಖೆಯಿಂದ ಮೆ//ಮಾರ್ಕೆಟಿಂಗ್ ಕನ್ಸಲ್ಟಂಟ್ಸ್ & ಏಜೆನ್ಸೀಸ್ ಲಿಮಿಟೆಡ್ ಮತ್ತು ಪಿ.ಪಿ ಪಬ್ಲಿಸಿಟೀಸ್ ರವರ ಮುಖಾಂತರ ಪ್ರಕಟಿಸಲಾದ ಬಾಬ್ತು ರೂ.8.63.712/- (ಎಂಟು ಲಕ್ಷದ ಅರವತ್ತಮೂರು ಸಾವಿರದ ಏಳುನೂರಾ ಹನ್ನೆರೆಡು ರೂಪಾಯಿಗಳು ಮಾತ್ರ) ಗಳನ್ನು ಬೇಸಾಯ ಸಂಬಂಧಿತ ಚಟುವಟಿಕೆಗಳು, ಲೆಕ್ಕ ಶೀರ್ಷಿಕೆ: 2401-00-109-0-21 (059) (ಹಿಂದಿನ ಸಮಗ್ರ ಕೃಷಿ ವಿಸ್ತರಣಾ ಪದ್ಧತಿ) ಅಡಿ ಭೂಚೇತನ ಕಾರ್ಯಕ್ರಮಕ್ಕಾಗಿ 2014-15ನೇ ಸಾಲಿನಲ್ಲಿ ತ್ರೈಮಾಸಿಕಗಳಲ್ಲಿ ಬಿಡುಗಡೆ ಮಾಡುವ ಅನುದಾನದಲ್ಲಿ ಭರಿಸಲು ಘಟನೋತ್ತರ ಮಂಜೂರಾತಿ ನೀಡಿ ಆದೇಶಿಸಿದೆ.

ಈ ಸಂಬಂಧ ಮೆ//ಮಾರ್ಕೆಟಿಂಗ್ ಕನ್ಸಲ್ಟಂಟ್ಸ್ & ಏಜೆನ್ಸೀಸ್ ಲಿಮಿಟೆಡ್ ಮತ್ತು ಪಿ.ಪಿ ಪಬ್ಲಿಸಿಟಿ ಸಲ್ಲಿಸುವ ಬಿಲ್ಲಿಗೆ ಸಹಿ ಮಾಡುವ ಅಧಿಕಾರ ಕೃಷಿ ನಿರ್ದೇಶಕರಿಗೆ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂ:ಆಇ/250/ವೆಚ್ಚ-4/2014, ದಿ: 04-07-2014 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜ್ಯೋತಿ.ಆರ್.ಜೆ),
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).

ಗೆ:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
3. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು
4. ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಖಜಾನೆ ಇಲಾಖೆ(SHT), ಬೆಂಗಳೂರು.
6. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ.
8. ಸರ್ಕಾರದ ಉಪ ಕಾರ್ಯದರ್ಶಿ -1 ಮತ್ತು 2, ಕೃಷಿ ಇಲಾಖೆ.
9. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ.
10. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ-4 ಮತ್ತು 5), ಆರ್ಥಿಕ ಇಲಾಖೆ.
11. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

25/7/14

ಹೊರಡಿಸಿದೆ
ದಿನಾಂಕ: 22/7/14